SRI M. MOHAMED ALI —Estimate might have been prepared but no amount has been provided in the budget. Therefore, no action could be teken.

ಶ್ರೀ ಚೌಡರೆಡ್ಡಿ.—ಸ್ವಾಮಿ, ಚಿಂತಾಮಣಿ ಟೌನ್ ವಿಭಾಗದಲ್ಲಿ ಅನೇಕ ಜನರು ಬರುತ್ತಾ ಇರುತ್ತಾರೆ. ಅಲ್ಲದೇ ಸರ್ಕಾರಿ ನೌಕರರು ಸಹ ಅಲ್ಲಿ ಬಂದಾಗ ಅವರಿಗೆ ತಂಗುವುದಕ್ಕೆ ಸ್ಥಳ ಇಲ್ಲದೆ ತೊಂದರೆಯಾಗಿರುತ್ತದೆ, ಆದ್ದರಿಂದ ತಾವು ಇದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡುತ್ತೀರಾ ?

SRI M. MAHAMED ALI —There is no need to tell me about the necessity of this, but the problem is paucity of funds.

Election to Bangalore City Corporation

96 SRI T. R SHAMANNA (Fort).—Will the Minister for Law and Municipal Administration be pleased to state.—

(*a*) when they intend to hold elections to the Corporation of the City of Bangalore ;

(*b*) the steps that are being taken to conduct the election at an early date ?

SRI D.K. NAIKAR (Minister for Law and Municipal Administration.)—

(*a*) At the appropriate time.

(*b*) The proposal for delimiting constituencies afresh has been published calling for objections. The objections received are being examined and the matter will be finalised as early as possible. Further steps for holding the elections would be considered thereafter.

ಶ್ರೀ ಟಿ.ಆರ್. ಶಾಮಣ್ಣ.—ಸ್ವಾಮಿ, ಈಗಾಗಲೇ ಬೆಂಗಳೂರು ನಗರಸಭೆ ರದ್ದಾಗಿ ಒಂದು ವರ್ಷ ಆಯಿತು. ನಗರದ ಆಡಳಿತ ಎಷ್ಟೇ ಉತ್ತಮವಾದಂಥ ಆಡಳಿತಗಾರರಿಂದ ನಡೆಸಿದರೂ ಕೂಡ, ಪ್ರಜೆಗಳ ಪ್ರತಿನಿಧಿಯಿಂದ ನಡೆಸತಕ್ಕದ್ದು ಸೂಕ್ತ ಅಲ್ಲವೇ ? ತಾವು ಹಿಂದೆ ಚುನಾವಣೆಗಳು ಆದಷ್ಟು ಬೇಗ ಆಗುತ್ತವೆ ಎಂದು ಆಶ್ವಾಸನೆ ಕೊಟ್ಟಿದ್ದು ಅನಿರ್ದಿಷ್ಟವಾಗಿ ಮುಂದಕ್ಕೆ ಹಾಕಿರುವುದು ಸರಿಯೇ ?

ಶ್ರೀ ಡಿ. ಕೆ. ನಾಯ್ಕರ್.—ನಾವು ಮುಂದಕ್ಕೆ ಹಾಕುತ್ತಾ ಬಂದಿಲ್ಲ. ಮೊದಲಿನಿಂದಲೂ ಕೂಡ ಆದಷ್ಟು ತೀವ್ರವಾಗಿ ಮಾಡಬೇಕು ಎಂದು ಹೇಳಿದ್ದೇವೆ. ಅಲ್ಲದೇ ಕಾಮನ್ ಕಾರ್ಪೊರೇಷನ್ ಆ್ಯಕ್ಟ್ ಬಗ್ಗೆ ನೋಡಬೇಕಾಗಿದೆ.

ಶ್ರೀ ಟಿ.ಆರ್. ಶಾಮಣ್ಣ.—ಸ್ವಾಮಿ, ಈಗ ಬೆಂಗಳೂರು ನಗರ ಅನೇಕ ವಿಭಾಗವಾಗಿರುವುದರಿಂದ ಇಲ್ಲಿಯ ನ್ಯೂನತೆಗಳನ್ನು ನರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿರಾ ? ಅಲ್ಲದೇ ಈಗ ಏನಾದರೂ ಕಾಮನ್ ಕಾರ್ಪೊರೇಷನ್ ಆ್ಯಕ್ಟ್ ಬಂದಾಗ ಆದು ಬದಲಾವಣೆ ಯಾಗುತ್ತದೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಈಗ ಸದ್ಯದ ಆ್ಯಕ್ಟ್ ಪ್ರಕಾರ ನಾವು ಸಿಂಗಲ್ ಕಾನ್ಸ್ಟಿಟ್ಯುಯನ್ಸಿ ಪ್ರಕಾರ ಮಾಡಿದ್ದೇವೆ. ಒಂದುವೇಳೆ ಕಾಮನ್ ಕಾರ್ಪೊರೇಷನ್ ಆ್ಯಕ್ಟ್ ಬಂದಾಗ ಅನಿವಾರ್ಯವಾಗಿ ಕೆಲವೊಂದು ಬದಲಾವಣೆ ಆಗುವ ಪ್ರಸಂಗ ಬರಬಹುದು.

ಶ್ರೀ ಟಿ.ಆರ್. ಶಾಮಣ್ಣ.—ಸ್ವಾಮಿ, ಆದಷ್ಟು ಬೇಗ ಚುನಾವಣೆ ಆಗುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ನಾಯ್ಕರ್.—ನಾನು ಈಗಾಗಲೇ ಮಾನ್ಯ ಸದಸ್ಯರಿಗೆ ಆದಷ್ಟು ತೀವ್ರವಾಗಿ ನೋಡೋಣ ಎಂದು ಹೇಳಿದ್ದೇನೆ. ಅಲ್ಲದೇ ಈಗ ತುರ್ತು ಪರಿಸ್ಥಿತಿ ಘೋಷಣೆಯಾಗಿದೆ, ಆದ್ದರಿಂದ ಇದನ್ನು ವಿಚಾರ ಮಾಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ ಬೆಂಗಳೂರು ನಗರ ಕಾರ್ಪೊರೇಷನ್ ಚುನಾವಣೆ ನಡೆಯುವುದಕ್ಕೆ ಕಾರಣ ಕಾಮನ್ ಕಾರ್ಪೊರೇಷನ್ ಆ್ಯಕ್ಟ್ ಬರೆದೇ ಇರುವುದೇ ಅಥವಾ ಎಮರ್ಜೆನ್ಸಿ ಇರುವುದೇ ಕಾರಣವೇ ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಡಿಟರ್ಮಿನೇಷನ್ ಆಫ್ ಡಿವಿಜನ್ಸ್ ಪುನಃ ಮಾಡಬೇಕಾಗುತ್ತದೆಯೋ ಅಥವಾ ಹೊಸ ಕಾರ್ಪೊರೇಷನ್ ಬಂದ ನಂತರವೋ ಎಂದು ಕೇಳಿದಕ್ಕೆ ನಾನು ಆ ರೀತಿ ಹೇಳಿದೆ. ಈಗ ತುರ್ತುಪರಿಸ್ಥಿತಿಯನ್ನೂ ಕೂಡ ಒಂದು ಕನ್ಸಿಡರೇಷನ್ ಎಂದು ತೆಗೆದುಕೊಳ್ಳಬೇಕಾಗೂತ್ತದೆ ಎಂದು ಸ್ಪಷ್ಟಪಡಿಸಿದೆ ;ಅಷ್ಟೆ.

1-30 P. M.

Reservation of 18 per cent income for welfore of SCST in Mysore District.

134. SRI K. SIDDIAH (Santhemarahalli).—Will the Minister for Rural Development and Social Welfare be pleased to state:—

(*a*) the number of Village Panchayats and Town Panchayats which have reserved 18 per cent of their net income for the welfare of Scheduled Castes/ Scheduled Tribes in Mysore District;

(*b*) the number of Village Panchayats and Taluk Boards which have reserved 18 per cent of their income in Mysore District;

(*c*) the specific schemes, if any, about which instructions have been issued by Government to reserve certain fund for the welfare of Scheduled Castes/Scheduled Tribes ?

SRI N. RACHIAH (Minister for Rural Development and Social Welfare).—

(*a*)	Number of Village Panchayats	...	581
(*b*)	Number of Town Panchayats	...	4
	Total	...	585
No. of Village Panchayats		...	581
No. of Taluk Boards		...	8